# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | **: 713** |
| **ಸದಸ್ಯರ ಹೆಸರು** | **: ಶ್ರೀ. ತಿಪ್ಪಣ್ಣ ಕಮಕನೂರ (ನಾಮನಿರ್ದೇಶನ ಹೊಂದಿದವರು)** |
| **ಉತ್ತರಿಸುವ ದಿನಾಂಕ** | **: 12.03.2020** |
| **ಉತ್ತರಿಸುವ ಸಚಿವರು** | **: ಮಾನ್ಯ ಜಲಸಂಪನ್ಮೂಲ ಸಚಿವರು** |

| | | |
|---|---|---|
| ಅ | ಕಲಬುರಗಿ ಜಿಲ್ಲೆಯ ಬೆಣ್ಣೆತೋರಾ, ಅಮರ್ಜಾ ಮತ್ತು ಕೆಳದಂಡೆ ಮುಲ್ಲಾಮಾರಿ ನೀರಾವರಿ ಯೋಜನೆಗಳು ಪ್ರಾರಂಭವಾಗಿರುವುದು ಯಾವಾಗ. | **1) ಕೆಳದಂಡೆ ಮುಲ್ಲಾಮಾರಿ ಯೋಜನೆ:** ಕಲಬುರಗಿ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ಕೆಳದಂಡೆ ಮುಲ್ಲಾಮಾರಿ ಯೋಜನೆಯನ್ನು ಬರಗಾಲ ಕಾಮಗಾರಿ ಎಂದು 1973-74 ರಲ್ಲಿ ಪ್ರಾರಂಭಿಸಲಾಯಿತು.<br>**2)ಬೆಣ್ಣೆತೋರಾ ಯೋಜನೆ:** ಕಲಬುರಗಿ ಜಿಲ್ಲೆಯ ಬೆಣ್ಣೆತೋರಾ ನೀರಾವರಿ ಯೋಜನೆಯು 1972-73ನೇ ಸಾಲಿನಲ್ಲಿ ಪ್ರಾರಂಭಿಸಲಾಯಿತು.<br>**3)ಅಮರ್ಜಾ ಯೋಜನೆ:** ಕಲಬುರಗಿ ಜಿಲ್ಲೆ ಆಳಂದ ತಾಲ್ಲೂಕಿನ ಕೆಳದಂಡೆ ಮುಲ್ಲಾಮಾರಿ ಯೋಜನೆಯನ್ನು ಬರಗಾಲ ಕಾಮಗಾರಿ ಎಂದು 1973-74 ರಲ್ಲಿ ಪ್ರಾರಂಭಿಸಲಾಯಿತು. |
| ಆ | ಈ ಮೂರು ಯೋಜನೆಗಳ ಅಂದಾಜು ವೆಚ್ಚ ಎಷ್ಟು; ಇದುವರೆಗೂ ಮಾಡಲಾಗಿರುವ ಖರ್ಚು ಎಷ್ಟು; | (see table below) |

| ಕ್ರ. ಸಂ. | ಯೋಜನೆ ಹೆಸರು | ಅಂದಾಜು ವೆಚ್ಚ (ರೂ.ಕೋಟಿ ಗಳಲ್ಲಿ) | ಮಾಡಲಾಗಿರುವ ಖರ್ಚು (ರೂ. ಕೋಟಿಗಳಲ್ಲಿ) |
|---|---|---|---|
| 1 | ಕೆಳದಂಡೆ ಮುಲ್ಲಾಮಾರಿ ಯೋಜನೆ | 303.00 | 293.00 |
| 2 | ಬೆಣ್ಣೆತೋರಾ ಯೋಜನೆ: | 625.00 | 522.58 |
| 3 | ಅಮರ್ಜಾ ಯೋಜನೆ | 343.75 | 334.84 |

| | | |
|---|---|---|
| ಇ | ಈ ಯೋಜನೆಗಳಲ್ಲಿ ಕಾಲುವೆಗಳ ನವೀಕರಣ ಕಾಮಗಾರಿ ಕೈಗೆತ್ತಿಗೊಂಡಿದ್ದಲ್ಲಿ ಅವುಗಳ ವೆಚ್ಚ ಎಷ್ಟು; | **ಕೆಳದಂಡೆ ಮುಲ್ಲಾಮಾರಿ** ಯೋಜನೆಯ ಕಾಲುವೆ ನವೀಕರಣ (ಆಧುನೀಕರಣ) ಕಾಮಗಾರಿಯನ್ನು ರು.124.77 ಕೋಟಿಗಳಿಗೆ ಕೈಗೆತ್ತಿಗೊಂಡಿದ್ದು, ಇಲ್ಲಿಯವರೆಗೆ ರೂ.65.91 ಕೋಟಿ ವೆಚ್ಚ ಮಾಡಲಾಗಿದೆ.<br>**ಬೆಣ್ಣೆತೋರಾ ಯೋಜನೆಯ** ಕಾಲುವೆ ಆಧುನೀಕರಣಕ್ಕೆ ಮಂಜೂರಾಗಿರುವ ಅನುದಾನ ರೂ. 174.15 ಕೋಟಿ ಹಾಗೂ ಈ ಯೋಜನೆಗೆ ವೆಚ್ಚವಾಗಿರುವ ಅನುದಾನ ರೂ.143.30 ಕೋಟಿ.<br>**ಅಮರ್ಜಾ ಯೋಜನೆಯ** ಅಮರ್ಜಾ ಯೋಜನೆಯ ಕಾಲುವೆಯ ನವೀಕರಣ ಕಾಮಗಾರಿಯನ್ನು ರೂ.125.00 ಕೋಟಿಗಳಿಗೆ ಕೈಗೆತ್ತಿಕೊಂಡಿದ್ದು ಜನವರಿ 2020 ರ ಅಂತ್ಯದವರೆಗೆ ರೂ.107.00 ಕೋಟ ವೆಚ್ಚ ಮಾಡಲಾಗಿದೆ ಇನ್ನು ಉಳಿದ ರೂ.18.00 ಕೋಟಿ ಕಾಮಗಾರಿ ಪ್ರಗತಿಯಲ್ಲಿದೆ. |
| ಈ | ಈ ಯೋಜನೆಗಳಿಂದ ಎಷ್ಟು ಎಕರೆ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ದೊರೆಯಬೇಕಾಗಿದೆ .ಪ್ರಸ್ತುತ ಎಷ್ಟು ಎಕರೆಗೆ ನೀರಾವರಿ ಸೌಲಭ್ಯ ದೊರೆಯುತ್ತಿದೆ. (ಯೋಜನಾವಾರು ಮಾಹಿತಿ ನೀಡುವುದು) | **ಕೆಳದಂಡೆ ಮುಲ್ಲಾಮಾರಿ** ಯೋಜನೆಯಿಂದ 24000 ಎಕರೆ (9713 ಹೇಕ್ಟರ) ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದ್ದು, ಇಲ್ಲಿವರೆಗೆ 23624 ಎಕರೆ (9560.28 ಹೇಕ್ಟರ) ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.<br>**ಬೆಣ್ಣೆತೋರಾ** ಯೋಜನೆಯಿಂದ 20234 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಕರ್ಯ ದೊರೆಯಲಿದೆ. ಪ್ರಸ್ತುತ 19590.25 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ.<br>**ಅಮರ್ಜಾ** ಯೋಜನೆಯಿಂದ 22000 ಎಕರೆ (8903 ಹೆಕ್ಟೇರ್) ಪ್ರದೇಶಕ್ಕೆ ನೀರಾವರಿ ಸೌಕರ್ಯ ದೊರೆಯಲಿದೆ. ಪ್ರಸ್ತುತ 10550 ಎಕರೆ (4269.50ಹೆಕ್ಟೇರ್) ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ. |

**ಸಂಖ್ಯೆ:ಜಸಂಇ 24 ಎಂಎಲ್ಎ 2020**

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು